# ಕನಸುಗಳ ದೇಶ, ನೆನಪುಗಳನ್ನು ಕೆದಕಿದಾಗ...

■ ವೆಂಕಟೇಶ ರಾಘವೇಂದ್ರ/ಶ್ರೀನಾಥ್ ಭಲ್ಲೆ



ಸಮ್ಮೇಳನದ ವೇದಿಕೆ ಮೇಲೆ ಉಪಸ್ಥಿತರಿರುವ ಅಕ್ಕ ಸಂಘಟನೆಯ ಪದಾಧಿಕಾರಿಗಳು.

**ಅಮೋಘ ವರ್ಷ ಮಂಟಪ, ಅಕ್ಕ ಸಮ್ಮೇಳನ, ಅಟ್ಲಾಂಟ, ಅಮೆರಿಕ:** 'ಇದು ಕನಸುಗಳ ದೇಶ, ಭವಿಷ್ಯದೆಡೆ ನೋಡುವ ದೇಶ. ನೀವೆಲ್ಲರೂ ಇಲ್ಲಿ ಸೇರಿ ಈ ಕಾರ್ಯಕ್ರಮದ ಮೂಲಕ ಭೂತಕಾಲವನ್ನು ಎಲ್ಲರಿಗೂ ನೆನಪುಮಾಡಿ ಕೊಡುತ್ತಿದ್ದೀರಿ. ಕನಸುಗಳನ್ನು, ನೆನಪುಗಳನ್ನು ಒಂದು ಮಾಡುವ ಒಳ್ಳೇ ಕೆಲಸ ಮಾಡಿದ್ದೀರಿ,' ಎಂದು ಅಕ್ಕ ಸಮ್ಮೇಳನದ ಉದ್ಘಾಟನಾ ಸಂಜೆಯಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರು ಹೊರನಾಡ ಕನ್ನಡಿಗರನ್ನು ಉದ್ದೇಶಿಸಿ ಹೇಳಿದರು.

'ಕಥೆ, ಕಾದಂಬರಿ, ಕಾವ್ಯ ಇವೆಲ್ಲವೂ ಕನ್ನಡದಲ್ಲಿ ಧಾರಾಳವಾಗಿ ಬೆಳೆದಿವೆ. ಶಾಸ್ತ್ರಗಳು ಕನ್ನಡದಲ್ಲಿ ಇನ್ನೂ ಬಹಳಷ್ಟು ಬೆಳೆಯಬೇಕಿದೆ. ಇದಕ್ಕೆ ವಿಜ್ಞಾನದ ಮುಂಚೂಣಿಯಲ್ಲಿರುವ ನೀವೆಲ್ಲರೂ ಶ್ರಮಿಸ ಬೇಕು,' ಎಂದು ಕಂಬಾರರು ಅಮೆರಿಕದ ಕನ್ನಡಿ ಗರಿಗೆ ಕರೆಕೊಟ್ಟರು.

ಮನೆಗೆ ಅತಿಥಿಗಳು ಬಂದರೆ ತರಾತುರಿ ಇದ್ದದ್ದೆ. ಆದರೆ ಆಪ್ತರು ಬಂದಾಗ ಸಂತೋಷ ಸಡಗರ ತುಂಬಿ ತುಳುಕುವುದು ಅಷ್ಟೇ ಸಹಜ. ಉತ್ತರ ಅಮೆರಿಕ ದೆಲ್ಲೆಡೆಯಿಂದ ಸಾವಿರಾರು ಕನ್ನಡಿಗರು ಒಟ್ಟಾದಾಗ ಅಟ್ಲಾಂಟಾದಲ್ಲಿ ನಾಡಹಬ್ಬದ ವಾತವರಣ ಸೃಷ್ಟಿ ಯಾಯಿತು. ಅನೌಪಚಾರಿಕ ರೀತಿಯಲ್ಲಿ ಶುರು ವಾದ ಸಮ್ಮೇಳನದಲ್ಲಿ ಉಲ್ಲಾಸಪೂರ್ಣತೆಗೇನೂ ಕೊರತೆಯಿರಲಿಲ್ಲ. ಅಮೆರಿಕದ ಮೂಲೆ ಮೂಲೆ ಗಳಿಂದ ಬಂದ ಕನ್ನಡಿಗರಿಗೆ ಒಂದೆಡೆ ಇಲ್ಲಿ ಸೇರಿರುವ ಸಂಭ್ರಮ, ಮತ್ತೊಂದೆಡೆ ಬಳಗ ಮಿತ್ರರೊಂದಿಗೆ ಪುನರ್ಮಿಲನದ ಖುಶಿ.

200ಕ್ಕೂ ಮಿಗಿಲಾದ ಸ್ವಯಂಸೇವಕರ ತಂಡ ಎಲ್ಲೆಲ್ಲೂ ಬಿರುಸಾಗಿ ಓಡಾಡುತ್ತಿದ್ದರು. ಬಂದ ಅತಿಥಿಗಳ ಊಟೋಪಚಾರಗಳ ವ್ಯವಸ್ಥೆಯಲ್ಲಿ ತಲ್ಲೀನರಾಗಿದ್ದರು. ಮುಖದ ಮೇಲಿನ ನಗೆಯಂತು ಕಿಂಚಿತ್ತೂ ಮಾಸಿರಲಿಲ್ಲ. 'ಚಿಕ್ಕಪುಟ್ಟ ತೊಂದರೆಗಳನ್ನು ಬಿಟ್ಟರೆ, ಎಲ್ಲವೂ ಸುಗಮವಾಗಿ ಶುರುವಾಗಿದೆ' ಎಂದರು ಸಮ್ಮೇಳನದ ಸಹ-ಸಂಚಾಲಕರಾದ ಶ್ರೀವಿಜಯ ಶ್ರೀನಿವಾಸ ಅವರು. 'ಬೆಂಗಳೂರು ನಗರದಲ್ಲೇ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಹೌದು ನಾವು ವಿಶಾಲ ಮನೋಭಾವ ಹೊಂದಿರಬೇಕು ಆದರೆ ನಮಗೆ ಅಮೂಲ್ಯವಾದದ್ದನ್ನು ಕಾಪಾಡಿಕೊಳ್ಳ ಬೇಕೆಂದು', ಕರ್ನಾಟಕ ಸರಕಾರವನ್ನು ಪ್ರತಿನಿಧಿಸಿದ ಕೆ ಡಿ ಎ ಅಧ್ಯಕ್ಷ ಮುಖ್ಯ ಮಂತ್ರಿ ಚಂದ್ರು ನುಡಿ ದರು. 'ಬರ ಪರಿಸ್ಥಿತಿಯಿಂದ ಸರಕಾರ ಈ ಬಾರಿ ಅಕ್ಕ ಕಾರ್ಯಕ್ರಮಕ್ಕೆ ಹೆಚ್ಚಿನ ಗಮನ ಹರಿಸಲಾಗಲಿಲ್ಲ, ಆದರೆ ನೀವೆಲ್ಲರೂ ಮಾಡುತ್ತಿ ರುವ ಕೆಲಸದ ಬಗ್ಗೆ ನಮಗೆಲ್ಲ ಅಪಾರವಾದ ಹೆಮ್ಮೆಯಿದೆ. ಕನ್ನಡದ ಬಗ್ಗೆ ನೀವು ತೋರಿಸುತ್ತಿರುವ ಶ್ರದ್ಧೆಯನ್ನು ನೋಡಿ ನಾವು ಕಲಿಯ ಬೇಕಾಗಿದೆ, ಎಂದರು. 'ನಮ್ಮ ಭಾಷೆಯ ಸೊಗಸು, ಸತ್ವ ಉಳಿದಿರುವುದು ನಮ್ಮ ಗ್ರಾಮಸ್ಥರಿಂದ' ಎಂದ ಚಂದ್ರು ಅವರು, ಗ್ರಾಮೀಣ ಬಳಕೆಯ ಹಲವಾರು ಉದಾಹರಣೆ ಗಳನ್ನು ಕೊಟ್ಟು, ತಮ್ಮ ಹಾಸ್ಯದಿಂದ ಸಭಿಕ ರನ್ನು ರಂಜಿಸಿದರು. 'ಕಳೆದ ಬಾರಿ ನಡೆದ ಅಕ್ಕ ಸಮ್ಮೇಳನದ ಬಗ್ಗೆ ನಮಗೆ ತಪ್ಪು ವರದಿಗಳು ಬಂದು, ನಕಾರಾತ್ಮಕ ಕಲ್ಪನೆ ಗಳಿಗೆ, ಎಣಿಕೆಗೆ ಅವಕಾಶ ವಾಯಿತು. ಈ ಬೃಹತ್ ಕೆಲಸ, ಹೊಣೆಗಾರಿಕೆ ನೋಡಿದ ಮೇಲೆ, ಅಕ್ಕ ಮತ್ತು ನೀವು ನಮ್ಮ ರಾಜ್ಯಕ್ಕೆ ಬಹು ದೊಡ್ಡ ಆಸ್ತಿಯೆಂಬುದರ ಬಗ್ಗೆ ಸಂಶಯವೇ ಇಲ್ಲ,' ಎಂದರು.

ಮಾಯಾ ರಾವ್ ಸಂಯೋಜನೆಯ, ಮಧು ನಟರಾಜ್ ಅವರ ನೇತೃತ್ವದ ನೃತ್ಯ ರೂಪಕ 'ಸಂಪ್ರದಾಯದಿಂದ ಸಮಕಾಲೀನದವರೆಗೆ' ಎಲ್ಲ ರನ್ನೂ ಪುಳಕಿತಗೊಳಿಸಿತು. ತಾಂತ್ರಿಕ ದೋಷ ಗಳಿಂದ, ಪ್ರಾರಂಭದ ದಿವಸದ ಅವ್ಯವಸ್ಥೆಯಿಂದ ಕರ್ನಾಟಕ ದಿಂದ ಬಂದ ಕೆಲ ಕಲಾವಿದರಿಗೂ, ಅವರ ಕಾರ್ಯಕ್ರಮದ ನಿರೀಕ್ಷೆಯಲ್ಲಿದ್ದ ಅಭಿಮಾನಿಗಳಿಗು ನಿರಾಸೆ ಕಾದಿತ್ತು.

ತರಳಬಾಳು ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಕೂಡ ನೆರೆದಿದ್ದವರನ್ನು ಉದ್ದೇಶಿಸಿ ಮಾತನಾಡಿದರು. ಅಕ್ಕದ ಅಂತಾ ರಾಷ್ಟ್ರೀಯ ಸಾಂಸ್ಕೃತಿಕ ನಿಯೋಜಕರಾದ ಐ ಎಂ ವಿಠ್ಠಲಮೂರ್ತಿ ಹಾಗೂ ಶ್ರೀನಿವಾಸ್ ಕಪ್ಪಣ್ಣ, ಕಲಾವಿದರಾದ ಡಾ. ವಿದ್ಯಾಭೂಷಣ, ನಿರ್ದೇಶಕ ಟಿ ಎನ್ ಸೀತಾರಾಂ ಹಾಗೂ ಇನ್ನೂ ಅನೇಕ ಗಣ್ಯರು ಉಪಸ್ಥಿತರಿದ್ದರು. ಔಪಚಾರಿಕ ಉದ್ಘಾಟನೆ ಶನಿವಾರ ಬೆಳಗ್ಗೆ ಜರುಗಿತು.